ದಿನಾಂಕ: ಫೆಬ್ರವರಿ 23, 2014

# ಯಪಿಎ-2 ಅವಧಿಯಲ್ಲಿ ರಾಜ್ಯ ಸಭಾ

-ಅರುಣ್ ಜೇಟ್ಲಿ
ವಿರೋಧ ಪಕ್ಷದ ನಾಯಕರು(ರಾಜ್ಯ ಸಭಾ)

ಯುಪಿಎ- II ಅವಧಿಯ ಕಡೆಯ ಸಂಸತ್ ಅಧಿವೇಶನ ಕೊನೆಗೊಂಡಿದೆ. ಕಳೆದ ಐದು ವರ್ಷಗಳಲ್ಲಿ ರಾಜ್ಯ ಸಭಾ ಕಾರ್ಯವಹಿಸಿದ ರೀತಿಯನ್ನು ಹಿಂದಿರುಗಿ ನೋಡುವ ಅವಕಾಶವನ್ನು ವಿರೋಧ ಪಕ್ಷದ ನಾಯಕನಾಗಿ ಮತ್ತು ನಮ್ಮ ಪಕ್ಷದ ನಾಯಕನಾಗಿ ಲಭಿಸಿದೆ. ಈ ಐದು ವರ್ಷಗಳಲ್ಲಿ, ಆಡಳಿತ ಪಕ್ಷ ಮತ್ತು ವಿರೋಧ ಪಕ್ಷದ ಹಲವಾರು ಸದಸ್ಯರು ಅತಿ ಉತ್ಕೃಷ್ಟ ಮಟ್ಟದ ಚರ್ಚೆಯಲ್ಲಿ ಪಾಲ್ಗೊಂಡಿದ್ದರು ಎಂಬ ವಿಚಾರ ನನಗೆ ಸಾಕಷ್ಟು ತೃಪ್ತಿತಂದಿದೆ. ಕೋಲಾಹಲ ಮತ್ತು ಘರ್ಷಣಾತ್ಮಕ ರಾಜಕೀಯದಿಂದಲೂ ಕಲಾಪದ ಸಾಕಷ್ಟು ಸಮಯ ವ್ಯರ್ಥವಾಗಿದ್ದು ವಿಶಾದನೀಯ. ಒಟ್ಟಾರೆ ನೋಡಿ ವಿಶ್ಲೇಷಿಸಿದಾಗ, ನಿಸ್ಸಂದೇಹವಾಗಿ ಅರ್ಥವಾಗುವ ಅಂಶವೆಂದರೆ ಉತ್ತಮ ಗುಣಮಟ್ಟದ ಚರ್ಚೆಗಳು ಸಾರ್ವಜನಿಕ ಹಿತರಕ್ಷಣೆ ಮಾಡುವ ಜೊತೆಗೆ, ವಿರೋಧ ಪಕ್ಷಗಳ ಸದಸ್ಯರು ಮತ್ತು ಅನ್ಯ ಸದಸ್ಯರು ಗದ್ದಲಕ್ಕಿಂತ ಚರ್ಚೆಗಳ ಮುಖೇನ ಹೆಚ್ಚಿನ ಸಾಧನೆ ಮಾಡಬಹುದಾಗಿದೆ. ಕೆಲವು ವಿಚಾರಗಳಲ್ಲಿ ಸೂಕ್ತ ಸಿದ್ಧತೆ ಮಾಡದೆ ಸದನಕ್ಕೆ ಬರುವ ಕೆಲವು ಸಚಿವರನ್ನು ತರಾಟೆಗೆ ತೆಗೆದುಕೊಂಡು ಮುಜುಗರವುಂಟುಮಾಡುವ ಅವಕಾಶ ಸರ್ವಸಿದ್ಧತೆ ಮಾಡಿಕೊಂಡ ವಿರೋಧ ಪಕ್ಷಕ್ಕೆ ಇರುತ್ತದೆ.

ಕಳೆದ ಐದು ವರ್ಷಗಳಲ್ಲಿ ರಾಜ್ಯಸಭೆಯಲ್ಲಿ ಸಂಭವಿಸಿದ ಅತಿ ಉತ್ಕೃಷ್ಟ ಚರ್ಚೆಗಳನ್ನು ನನ್ನ ವೈಯಕ್ತಿಕ ದಾಖಲೆಗಳಂದ ಹೆಕ್ಕಿತೆಗೆಯಲು ಬಯಸುತ್ತೇನೆ. 2009ರ ಮುಂಗಾರು ಅಧಿವೇಶನದಲ್ಲಿ ಮೂರು ದಿವಸಗಳ ಸುದೀರ್ಘ ಚರ್ಚೆಯಲ್ಲಿ 2ಜಿ ತರಂಗಾಂತರ ಹಂಚಿಕೆಯ ಸಂಪೂರ್ಣ ಸತ್ಯಾಂಶವನ್ನು ಬಹಿರಂಗಪಡಿಸಲಾಯಿತು ಮತ್ತು ಎಲ್ಲರ ಗಮನಕ್ಕೆ ತರಲಾಯಿತು. ಹಗರಣದ ಮುಖ್ಯ ರೂವಾರಿ ಎನಿಸಿದ್ದ ದೂರವಾಣಿ ಸಚಿವರಾಗಿದ್ದ ಶ್ರೀ ಎ.ರಾಜ ಅವರು ತಮ್ಮ ಆತ್ಮರಕ್ಷಣೆಗೆ ಹೆಣಗಾಡಬೇಕಾಯಿತು. ಚರ್ಚೆಯ ಲಯದಲ್ಲಿ ಬಹಿರಂಗಗೊಂಡ ಹಲವಾರು ವಿಚಾರಗಳು ಬೆಳಕಿಗೆ ಬಂದವು ಮತ್ತು ಅವುಗಳು ಈಗ ಸಿಬಿಐ ಆರೋಪಪಟ್ಟಿಯ ಭಾಗವಾಗಿವೆ.

ಪಾಕಿಸ್ತಾನದೊಂದಿಗೆ ಸಮಾಲೋಚನೆ ನಡೆಸಿದ ಭಾರತ ತನ್ನ ಸರ್ಕಾರಿ ನೀತಿಯನ್ನು ಅವಹೇಳಿಸುವಂತೆ ಭಯೋತ್ಪಾದನೆ ಕುರಿತು ಭಾರತಕ್ಕಿದ್ದ ಕಾಳಜಿಗಳನ್ನು ಕಡೆಗಣಿಸುವ ಜಂಟಿ ಹೇಳಿಕೆಯನ್ನು ಶರ್ಮ-ಅಲ್-ಶೇಖ್‌ನಲ್ಲಿ ನಮ್ಮ ಪ್ರಧಾನ ಮಂತ್ರಿಗಳು ಪಾಕಿಸ್ತಾನದ ಪ್ರಧಾನ ಮಂತ್ರಿಗಳೊಂದಿಗೆ ಸೇರಿಕೊಂಡು ನೀಡಿದ್ದರು. ಶರ್ಮ್-ಅಲ್-ಶೇಖ್ ಕರಡುಪ್ರತಿ ಕುರಿತು ಪ್ರಧಾನಮಂತ್ರಿಗಳು ಸ್ಪಷ್ಟನೆ ನೀಡಿದಾಗ ರಾಜ್ಯ ಸಭೆಯಲ್ಲಿ ಶ್ರೇಷ್ಠ ಸ್ತರದ ಚರ್ಚೆ ಏರ್ಪಟ್ಟಿತ್ತು. ಹವಾಮಾನ ಬದಲಾವಣೆಕುರಿತು ಕೋಪನ್‌ಹೇಗನ್ ಸಮಾಲೋಚನೆಗಳಲ್ಲಿ ಮಂಡಿಸಲು ಸಿದ್ಧ

ಪಡಿಸಿದ್ದ ಕರಡುಪ್ರತಿಯ ದೀರ್ಘ ಚರ್ಚೆಯ ನಂತರ ಕರಡಿನಲ್ಲಿ ಸಾಕಷ್ಟು ಬದಲಾವಣೆ ತರಲಾಯಿತು. ಒಂದು ವಿಚಾರದ ತಜ್ಞರು ನಾಚುವಂತಹ ಮೇರುಮಟ್ಟದ ಚರ್ಚೆ ಏರ್ಪಟ್ಟಿತ್ತು.

ಡಿಸೆಂಬರ್ 6, 1992ರಂದು ನಡೆದ ಘಟನೆಗಳ ಕುರಿತು ನ್ಯಾಯಮೂರ್ತಿ ಲಿಬರ್ಹನ್ ಆಯೋಗ ವರದಿಯ ಚರ್ಚೆ ಸಂಸತ್ ಸದನಗಳಲ್ಲಿ ನಡೆಯಿತು. ಚರ್ಚೆಯು ತಡಸಂಜೆಯವರೆಗೂ ನಡೆಯಿತು, ವರದಿಯ ಹಲವಾರು ಪ್ರಮುಖ ಸತ್ಯಾಂಷಗಳನ್ನು ಸದಸ್ಯರು ವಿವರಿಸಿದ್ದರು ಮತ್ತು ಅರೋಪಗಳನ್ನು ಅಥವಾ ವಿರೋಧಾಭಾಸದ ಅಂಶಗಳನ್ನು ವಿಶೇಷವಾಗಿ ವಿಶ್ಲೇಷಿದ್ದರು. ನ್ಯಾಯಮೂರ್ತಿ ಸೌಮಿತ್ರ ಸೇನ್ ಅವರನ್ನು ಸಂಸತ್ ಸದನದಲ್ಲಿ ಛೀಮಾರಿ ಹಾಕಿದ ಪ್ರಕರಣವೂ ರಾಜ್ಯ ಸಭೆಯಲ್ಲಿ ಎರಡು ದಿವಸಗಳ ಚರ್ಚೆಗೆ ಗ್ರಾಸವಾಯಿತು. ನ್ಯಾಯಮೂರ್ತಿಯ ಹೇಳಿಕೆಯನ್ನು ಹಲವಾರು ತಾಸುಗಳು ಆಲಿಸಿದ ಸದಸ್ಯರಿಗೆ ರಾಜ್ಯಸಭೆ ನ್ಯಾಯಾಲಯವಾಗಿ ಮಾರ್ಪಟ್ಟಿದೆಯೇ ಎಂಬ ಭಾವನೆ ಮೂಡಿತ್ತು. ನ್ಯಾಯಮೂರ್ತಿಗಳ ಮನವಿಯನ್ನು ಪರಿಗಣಿಸಲಾಯಿತು ಮತ್ತು ಲಭ್ಯವಿದ್ದ ದಾಖಲೆಗಳ ಆಧಾರದ ಮೇಲೆ ವಿಶ್ಲೇಷಣೆ ನಡೆಸಿದ್ದ ಸದಸ್ಯರು ಅಂತಿಮವಾಗಿ ನ್ಯಾಯಮೂರ್ತಿಗಳು ತಪ್ಪಿತಸ್ಥರು ಎಂದು ನಿರ್ಧರಿಸಲಾಯಿತು. ದುಬ್ರಿ ಮತ್ತು ಕೊಕ್ರಾಜಾರ್ ಸೇರಿದಂತೆ ಈಶಾನ್ಯ ಭಾಗದಲ್ಲಿ ಉದ್ಭವಿಸಿದ ಕೋಮುಗಲಭೆ ಮತ್ತು ದೇಶದ ವಿವಿಧ ರಾಜ್ಯಗಳಲ್ಲಿ  ಭಾಗದ ವಿದ್ಯಾರ್ಥಿಗಳು ಮತ್ತು ಯುವಕರ ಮೇಲೆ ನಡೆದ ಹಿಂಸಾಚಾರದ ಘಟನೆಗಳನ್ನು ರಾಜ್ಯಸಭೆಯಲ್ಲಿ ನಿರಂತರವಾಗಿ ಚರ್ಚಿಸಲಾಯಿತು. ಪ್ರಮುಖ ರಾಷ್ಟ್ರೀಯ ಹಿತಾಸಕ್ತಿಯ ವಿಚಾರಗಳು ಉದ್ಭವಿಸಿದಾಗ ಸದಸ್ಯರು ಪಕ್ಷಬೇಧ ಮರೆತು ಈಶಾನ್ಯ ಪ್ರಾಂತ್ಯದ ಸಮಸ್ಯೆ ಬಗೆಹರಿಸಲು ಒಂದಾದರು.

ಭ್ರಷ್ಟಾಚಾರದ ವಿಚಾರಗಳು ರಾಜ್ಯ ಸಭೆಯ ಬಹುಸಮಯವನ್ನು ಆವರಿಸಿತ್ತು. ಕಾಮನ್‌ವೆಲ್ತ್ ಕ್ರೀಡಾಕೂಟ ಹಗರಣ, ಕಲ್ಲಿದ್ದಲು ಹಂಚಿಕೆ ಹಗರಣ, ವಿವಿಐಪಿ ಹೆಲಿಕಾಪ್ಟರ್ ವಹಿವಾಟು ಸೇರಿದಂತೆ ದೇಶದಲ್ಲಿ ಸಂಭವಿಸಿದ ವಿವಿಧ ಭ್ರಷ್ಟಾಚಾರ ಪ್ರಕರಣಗಳ ಚರ್ಚೆಯನ್ನು ಸುವಿಸ್ತಾರವಾಗಿ ಮಾಡಲಾಯಿತು. ಲೋಕಪಾಲ್ ಮಸೂದೆಯನ್ನು ಎರಡೆರಡು ಬಾರಿ ಚರ್ಚಿಸಲಾಯಿತು. 29 ಡಿಸೆಂಬರ್ 2011ರಂದು ಮಧ್ಯರಾತ್ರಿಯವರೆಗೂ ನಡೆದ ಚರ್ಚೆಯನ್ನು ಅನಿರೀಕ್ಷಿತವಾಗಿ ಮಧ್ಯರಾತ್ರಿ ಸ್ಥಗಿತಗೊಳಿಸಲಾಗಿತ್ತು. ಆ ಸಂದರ್ಭದಲ್ಲಿ ದುರ್ಬಲ ಲೋಕಪಾಲ್ ಮಸೂದೆಗೆ ವಿಪಕ್ಷಗಳು ವಿರೋಧ ವ್ಯಕ್ತಪಡಿಸಿದ್ದವು. ಆದರೆ ನಂತರ ಮಸೂದೆಯನ್ನು ರಾಜ್ಯ ಸಭಾ ಆಯ್ಕೆ ಸಮಿತಿಗೆ ರವಾನಿಸಿದರು, ಮಸೂದೆಗೆ ಸೂಕ್ತ ಮಾರ್ಪಾಟುಗಳನ್ನು ಮಾಡಲಾಯಿತು ಮತ್ತು ಲೋಕಪಾಲ್ ಅಂತಿಮ ಕರಡನ್ನು ರಾಜ್ಯಸಭೆ ಅಂಗೀಕರಿಸಿತು. ಭ್ರಷ್ಟಾಚಾರ ನಿಗ್ರಹ ಯೋಧ ಅಣ್ಣಾ ಹಜಾರೆ ಅವರನ್ನು ಬಂಧಿಸಿದ್ದ ವಿಚಾರ ರಾಜ್ಯಸಭೆಯಲ್ಲಿ ಬಿರುಸಿನ ಚರ್ಚೆಗೆ ಎಡೆಮಾಡಿಕೊಟ್ಟಿತ್ತು.

ರಾಜ್ಯ ಸಭೆ ಅರವತ್ತು ವರ್ಷಗಳನ್ನು ಪೂರ್ಣಗೊಳಿಸಿದ ಸಂದರ್ಭವು ಸದಸ್ಯರಿಗೆ ಹಿಂತಿರುಗಿ ಭಾರತೀಯ ಪ್ರಜಾಪ್ರಭುತ್ವದ ಕುರಿತು ಅವಲೋಕಿಸುವ ಅವಕಾಶ ಕಲ್ಪಿಸಿಕೊಟ್ಟಿತ್ತು. ಈ ಸಂದರ್ಭದ ಚರ್ಚೆ ಸ್ಫೂರ್ತಿದಾಯಕ ಮತ್ತು ಪಕ್ಷಪಾತ ಮುಕ್ತವಾಗಿತ್ತು. ಲೋಬಿನಡೆಸುವ ವ್ಯಕ್ತಿಯೊಬ್ಬರ ದೂರವಾಣಿ ಕದ್ದಾಲಿಕೆ ವಿಚಾರವೂ ಚರ್ಚೆಗೆ ಗ್ರಾಸವಾಯಿತು ಮತ್ತು ಫೋನ್ ಕದ್ದಾಲಿಕೆ ಇತಿಮಿತಿ ಮತ್ತು ನಿರ್ಣಯ ಪ್ರಕ್ರಿಯೆಯಲ್ಲಿ ಲಾಬಿದಾರರ ಯೋಗದಾನದ ಕುರಿತು ಬಿರುಸಿನ ಚರ್ಚೆನಡೆಯಿತು.

ಪರಿಗಣನೆಗೆ ಬಂದ ಹಲವಾರು ಸಚಿವಾಲಯಗಳ ಕಾರ್ಯವೈಖರಿಯ ಕುರಿತ ಚರ್ಚೆ ಪದೆ ಪದೆ ರಾಜ್ಯಸಭೆಯಲ್ಲಿ ಏರ್ಪಟ್ಟಿತ್ತು. ರಾಜ್ಯಸಭೆಯಲ್ಲಿ ವಿವಿಧ ಶಾಸನಗಳನ್ನು ಅಂಗೀಕರಿಸಲಾಗಿದೆ. ಅವುಗಳಲ್ಲಿ ಅತಿ ಮುಖ್ಯವೆಂದರೆ ಮಹಿಳಾ ಮೀಸಲಾತಿ ಮಸೂದೆ(ಲೋಕಸಭೆಯಲ್ಲಿ ಈವರೆಗೂ ಅಂಗೀಕಾರವಾಗಿಲ್ಲ), ಲೋಕಪಾಲ್ ಮಸೂದೆ, ಆಂಧ್ರಪ್ರದೇಶ ವಿಭಜನೆ ಕಾನೂನು, ಪರಮಾಣು ವಿನಾಷಕ ಮಸೂದೆಯ ನಾಗರಿಕ ಹೊಣೆಗಾರಿಕೆ, ಆಹಾರ ಮಸೂದೆ ಹಾಗೂ ಹೊಸ ಭೂ ಮಸೂದೆ. ನಾಗರಿಕ ಮರಮಾಣು ಹೊಣೆಗಾರಿಕೆ ಕಾನೂನು ಚರ್ಚೆಗೆ ಬಂದಾಗ ಅದರ ತಾಂತ್ರಿಕ ಸೂಕ್ಷ್ಮತೆ ಕುರಿತು ಮೇರು ಸ್ತರದ ಚರ್ಚೆ ಏರ್ಪಟ್ಟಿತ್ತು. ಮಹಿಳಾ ಮೀಸಲಾತಿ ಮಸೂದೆ ಮತ್ತು ತೆಲಂಗಾಣ ರಾಜ್ಯ ಸ್ಥಾಪನೆ ಮಸೂದೆಗಳು ಭಾವೋದ್ವೇಗದ ಚರ್ಚೆಗಳಿಗೆ ಗ್ರಾಸವಾಗಿ, ಕೊಲಾಹಲದ ನಡುವೆಯೇ ಸದಸ್ಯರು ಭಾಷಣ ಮಾಡಬೇಕಾಯಿತು. ದಿನದ ಅಂತ್ಯದವರೆಗೂ, ಗದ್ದಲದ ವಾತಾವರಣದಲ್ಲೇ ಚರ್ಚೆ ಮುಂದುವರೆದಿತ್ತು.

ಇವುಗಳಲ್ಲಿ ಹಲವಾರು ಚರ್ಚೆಗಳನ್ನು ಖಾಸಗಿ ಸುದ್ದಿ ವಾಹಿನಿಗಳು ನೇರಪ್ರಸಾರ ಮಾಡಿದ್ದು, ಚರ್ಚೆಯ ಗುಣಮಟ್ಟ ಸಾರ್ವಜನಿಕರ ಮೆಚ್ಚುಗೆಗೆ ಪಾತ್ರವಾಗಿತ್ತು ಎಂದು ಇದರಿಂದ ತಿಳಿದು ಬರುತ್ತದೆ. ನ್ಯಾಯಮೂರ್ತಿ ಸೌಮಿತ್ರ ಸೇನ್ ಅವರಿಗೆ ಛೀಮಾರಿ ಹಾಕಿದ ಚರ್ಚೆಗಳು ರಾಜ್ಯ ಸಭಾ ಶಾಸನಸಭೆಯ ಪ್ರಕಾಶನದಡಿ ಹೊರತಂದ ವಿವರವಾದ ಪುಸ್ತಕದ ಭಾಗವಾಗಿ ಹೊರಬಂದಿದೆ. ರಾಜ್ಯ ಸಭಾ ಚರ್ಚೆ ನಡೆಸಿದಾಗ ಅದು ಉತ್ತಮವಾಗಿ ಚರ್ಚಿಸುತ್ತದೆ. ಹಲವಾರು ಸದಸ್ಯರು, ಅದರಲ್ಲೂ ವಿಶೇಷವಾಗಿ ಸಭಾಪತಿಗಳು ಕೊಲಾಹಲ ನಿಯಂತ್ರಿಸಲಾಗದೆ ಬೇಸತ್ತಿದ್ದರು. ರಾಜ್ಯಸಭಾ ಅರಾಜಕತೆಯ ಒಕ್ಕೂಟವೇ, ಎಂದು ಅವರು ಹಲವುಬಾರಿ ಟೀಕಿಸಿದ್ದರು. ಟೀಕೆಟಿಪ್ಪಣಿಗಳು ದಾಖಲೆಗೆ ಹೋಗಬೇಕೆ ಬೇಡವೇ ಎಂಬ ವಿಚಾರದಲ್ಲೂ ಸುವಿಸ್ತಾರ ಚರ್ಚೆ ನಡೆಸಬೇಕು ಎಂದು ಹಲವಾರು ಸದಸ್ಯರು ತುದಿಗಾಲಲ್ಲಿ ನಿಂತು ಸಭಾಪತಿಗಳನ್ನು ಒತ್ತಾಯಿಸುತ್ತಿದ್ದರು. ಕೆಲವರು ಅವರ ಮಾತಿಗೆ ಸಮ್ಮತಿಸಿದರು, ಕೆಲವರು ಆಕ್ಷೇಪ ವ್ಯಕ್ತಪಡಿಸಿದರು, ಮತ್ತೆ ಕೆಲವರು ಅರಾಜಕತೆಗೆ ಎಡೆಮಾಡಿಕೊಟ್ಟವರು ಒಕ್ಕೂಟ ಮಾಡಿಕೊಳ್ಳಲು ಸಾಧ್ಯವೆ ಎಂದು ಆಶ್ಚರ್ಯವ್ಯಕ್ತಪಡಿಸಿದ್ದರು. ರಾಜ್ಯಸಭೆಯ ಕೆಲವು ಪ್ರಮುಖ ಕ್ಷಣಗಳು ಹೀಗಿದ್ದವು. ಇಂತಹ ಉತ್ಕೃಷ್ಟ ಮಟ್ಟದ ಚರ್ಚೆಗೆ ಹೆಚ್ಚಿನ ಅವಕಾಶ ಲಭಿಸಿದ್ದರೆ ಒಳ್ಳೆಯದಿತ್ತು ಎಂಬ ಅಭಿಲಾಶೆ ಏರ್ಪಟ್ಟಿದೆ.

✲✲✲✲✲